## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 547(634) |
| ಸದಸ್ಯರ ಹೆಸರು | : | ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09.03.2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದ Samagra Shiksha Abhiyan ಜಾರಿಯಲ್ಲಿರುವ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಅನುದಾನ ಬಿಡುಗಡೆಯಾಗಿದೆ; ಅದರ ಬಳಕೆ ಪ್ರಮಾಣ ಎಷ್ಟು;</td><td>
<table>
<tr><td colspan="10">ರಾಜ್ಯದ Samagra Shiksha Abhiyan ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನದ ಮಾಹಿತಿ</td></tr>
<tr><th rowspan="2">Sl .No</th><th rowspan="2">Year</th><th colspan="3">Releases</th><th rowspan="2">OB</th><th rowspan="2">GRAND TOTAL</th><th rowspan="2">Expenditure</th><th rowspan="2">% of Exp</th></tr>
<tr><th>GOI</th><th>GOK</th><th>Total</th></tr>
<tr><td>1</td><td>2023-24</td><td>82748.8</td><td>55165.84</td><td>137914.6</td><td>48720.52</td><td>186635.13</td><td>178966.67</td><td>95.89</td></tr>
<tr><td>2</td><td>2024-25</td><td>89356.3</td><td>59570.89</td><td>148927.2</td><td>7668.17</td><td>156595.39</td><td>139454.00</td><td>89.05</td></tr>
<tr><td>3</td><td>2025-26 (ಇದು ವರೆವಿಗೂ)</td><td>77743.84</td><td>53191.23</td><td>130935.07</td><td>17137.09</td><td>148072.16</td><td>92312.14</td><td>62.34</td></tr>
</table>
</td></tr>
<tr><td>ಆ</td><td>Right to Education Act ಅನುಷ್ಠಾನದ ಸ್ಥಿತಿ ಏನು; ಖಾಸಗಿ ಶಾಲೆಗಳಲ್ಲಿ 25% ಮೀಸಲಾತಿ ಅಡಿಯಲ್ಲಿ ಎಷ್ಟು ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ: (ಜಿಲ್ಲಾವಾರು ಮಾಹಿತಿ ಒದಗಿಸುವುದು);</td><td>2026-27ನೇ ಸಾಲಿಗೆ Right to Education Act ಅನುಷ್ಠಾನದ ಕುರಿತು ಕ್ರಮ ವಹಿಸಲಾಗುತ್ತಿದೆ.<br><br>2025-26ನೇ ಸಾಲಿಗೆ ಖಾಸಗಿ ಶಾಲೆಗಳಲ್ಲಿ 25% ಮೀಸಲಾತಿ ಅಡಿಯಲ್ಲಿ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಒಟ್ಟು 1055 ಸಂಖ್ಯೆಯ ವಿದ್ಯಾರ್ಥಿಗಳು ಹಾಗೂ ಅನುದಾನಿತ ಶಾಲೆಗಳಲ್ಲಿ ಒಟ್ಟು 1446 ಸಂಖ್ಯೆಯ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.<br><br>ಹಿಂದಿನ ಸಾಲುಗಳಲ್ಲಿ RTE ರಡಿ ಪ್ರವೇಶ ಪಡೆದು ಪ್ರಸ್ತುತ ಸಾಲಿನಲ್ಲಿ ಮುಂದುವರೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯಾ ವಿವರವನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.</td></tr>
<tr><td>ಇ</td><td>ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ ಬಿಟ್ಟು ಹೋಗುವಿಕೆ ಪ್ರಮಾಣ ಕಡಿಮೆ ಮಾಡಲು ಸರ್ಕಾರ ಯಾವ ವಿಶೇಷ ಯೋಜನೆಗಳನ್ನು ಜಾರಿಗೆ ತರಲಾಗಿದೆ;</td><td>ಸರ್ಕಾರಿ ಶಾಲೆಗಳಲ್ಲಿ ದಾಖಲಾತಿಯನ್ನು ಉತ್ತಮ ಪಡಿಸಲು ದಿನಾಂಕ:14.11.2025 ರಂದು ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಪೋಷಕರ ಮಹಾ ಸಭೆಯನ್ನು ನಡೆಸಲಾಗಿದ್ದು, ವರ್ಷ ಪೂರ್ತಿ ಸರ್ಕಾರಿ ಶಾಲೆಗಳ ದಾಖಲಾತಿ ಉತ್ತಮಪಡಿಸಲು ಪ್ರಚಾರ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.<br><br>ಎಲ್ಲಾ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ವಿದ್ಯಾ ವಿಕಾಸ ಯೋಜನಯಡಿ ಉಚಿತ</td></tr>
</table>

| | | |
|---|---|---|
| ಈ | ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿಸಲು ಸರ್ಕಾರದಿಂದ ಯಾವ ಹೊಸ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ? | ಪಠ್ಯಪುಸ್ತಕ, ಎರಡು ಜೊತೆ ಸಮವಸ್ತ್ರ, ಶೂ-ಸಾಕ್ಸ್ ಮತ್ತು ಮಧ್ಯಾಹ್ನ ಬಿಸಿಯೂಟ, ಮೊಟ್ಟೆ/ಬಾಳೆಹಣ್ಣು, ಹಾಲು ವಿತರಿಸಲಾಗುತ್ತಿದೆ.<br><br>2025-26ನೇ ಸಾಲಿನವರೆಗೆ 9522 ಸರ್ಕಾರಿ ಶಾಲೆಗಳಲ್ಲಿ 1 ರಿಂದ 5 ನೇ ತರಗತಿಗೆ ದ್ವಿಭಾಷಾ ಮಾಧ್ಯಮ ತರಗತಿಗಳನ್ನು ಪ್ರಾಂಭಿಸಲಾಗಿದೆ. 6456 ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ದ್ವಿಭಾಷಾ ತರಗತಿಗಳನ್ನು ಪ್ರಾರಂಭಿಸಲಾಗಿದೆ.<br><br>ಸರ್ಕಾರಿ ಶಾಲೆಗಳನ್ನು ಉತ್ತಮಪಡಿಸಲು ಪೂರ್ವ ಪ್ರಾಥಮಿಕ ತರಗತಿಯಿಂದ ಪದವಿ ಪೂರ್ವ ಶಿಕ್ಷಣದವರೆಗೆ ಒಂದೇ ಸೂರಿನಡಿ ಶಿಕ್ಷಣ ನೀಡಲು ಸ್ಥಳಾವಕಾಶ ಮತ್ತು ಉತ್ತಮ ದಾಖಲಾತಿ ಹೊಂದಿರುವ ಆಯ್ದ ಸರ್ಕಾರಿ ಶಾಲೆಗಳನ್ನು ಕೆ.ಪಿ.ಎಸ್. ಶಾಲೆಗಳನ್ನಾಗಿ ಉನ್ನತೀಕರಿಸಲಾಗುತ್ತಿದೆ. 2018 ರಿಂದ 2025 ರವರೆಗೆ 309 ಕೆ.ಪಿ.ಎಸ್. ಶಾಲೆಗಳನ್ನು ಸ್ಥಾಪಿಸಿದ್ದು, 2025-26ನೇ ಎ.ಡಿ.ಬಿ. ಸಹಯೋಗದೊಂದಿಗೆ 500 ಕೆ.ಪಿ.ಎಸ್, ಕೆ.ಕೆ.ಆರ್.ಡಿ.ಬಿ. ಯೋಜನೆಯಡಿ 200 ಕೆ.ಪಿ.ಎಸ್. 04 ಗಣಿ ಬಾಧಿತ ಜಿಲ್ಲೆಗಳ 10 CEPMIZ ತಾಲ್ಲೂಕುಗಳಲ್ಲಿ KMERC ಅನುದಾನದಡಿ 100 ಕೆ.ಪಿ.ಎಸ್. ಶಾಲೆಗಳು, 585 ಪಿಎಂ ಶ್ರೀ ಶಾಲೆಗಳನ್ನು ಕೆ.ಪಿ.ಎಸ್. ಮಾದರಿಯಲ್ಲಿ ಉನ್ನತೀಕರಿಸಲು ಕ್ರಮವಹಿಸಲಾಗಿದೆ.<br><br>2026-27ನೇ ಶೈಕ್ಷಣಿಕ ಸಾಲಿನಿಂದ ಕೆ.ಪಿ.ಎಸ್. ಶಾಲೆಗಳಲ್ಲಿ LKG ಯಿಂದ 5ನೇ ತರಗತಿಯವರೆಗೆ ಏಕ ತರಗತಿ ಪಠ್ಯಪುಸ್ತಕ ಆಧಾರಿತ ದ್ವಿಭಾಷಾ ಮಾಧ್ಯಮದ ಬೋಧನೆಯನ್ನು ಅಳವಡಿಸಿಕೊಳ್ಳಲಾಗುತ್ತಿದೆ, 6 ಪ್ರಸ್ತುತ ಇರುವ ಮಾಧ್ಯಮದೊಂದಿಗೆ ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಿ ಮಾಧ್ಯಮವಾರು ಏಕತರಗತಿ ಪಠ್ಯಪುಸ್ತಕ ಆಧಾರಿತ ತರಗತಿಗಳು, ಮತ್ತು ಕ್ರಿಯಾಶೀಲ ಬೋಧನಾ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗುತ್ತಿದೆ. 1 ನೇ ತರಗತಿಯಿಂದ ಕಂಪ್ಯೂಟರ್ ಶಿಕ್ಷಣದ ಪರಿಚಯ, 6ನೇ ತರಗತಿಯಿಂದ ಉದ್ಯಮ ಸಮ್ಮಿಳಿತ ವೃತ್ತಿಪರ ಕೌಶಲ ಆಧಾರಿತ ಪಠ್ಯಕ್ರಮದ ಪರಿಚಯ ಮತ್ತು 8 ನೇ ತರಗತಿಯಿಂದ ಮಂಡಳಿ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಾಮರ್ಥ್ಯ ಅಭಿವೃದ್ಧಿ ತರಗತಿಗಳನ್ನು ಪ್ರಾರಂಭಿಸಲಾಗುತ್ತಿದೆ. ಭವಿಷ್ಯದ ವೃತ್ತಿಪರ ತರಬೇತಿಗಳನ್ನು 6 ನೇ ತರಗತಿಯಿಂದ ಆರಂಭಿಸಲು, ಪಠ್ಯಕ್ರಮವನ್ನು ಉದ್ಯಮ ಪಾಲುದಾರರ ಸಹಾಯದಿಂದ ವಿನ್ಯಾಸಗೊಳಿಸಿ ಜಂಟಿ ಪ್ರಮಾಣ ಪತ್ರ ನೀಡಲು ಕ್ರಮವಹಿಸಲಾಗುತ್ತಿದೆ. ಈ ಶಾಲೆಗಳು ಸಮರ್ಥ ಶಾಲಾ ಮುಖ್ಯಸ್ಥರು ಮತ್ತು ಅರ್ಹ ಶಿಕ್ಷಕರ ಸಂಪೂರ್ಣ ಸಂಪನ್ಮೂಲವನ್ನು ಹೊಂದಲು ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಪ್ರಕ್ರಿಯೆಯಲ್ಲಿ ಸೂಕ್ತ ತಿದ್ದುಪಡಿಗಳನ್ನು ತರಲಾಗುವುದು ಮತ್ತು ಶಿಕ್ಷಕರ ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಈ ಶಾಲೆಗಳನ್ನು ಪ್ರೋತ್ಸಾಹಿಸಲಾಗುವುದು.<br><br>ಅಗತ್ಯತೆಗೆ ಅನುಗುಣವಾದ ಶಿಕ್ಷಕರ ತರಬೇತಿ, ಸಾಮರ್ಥ್ಯ ಅಭಿವೃದ್ಧಿ ಉಪಕ್ರಮಗಳ ಮೂಲಕ ತರಗತಿ ಕಲಿಕೆಯ ಅಭ್ಯಾಸಗಳನ್ನು ಬಲಪಡಿಸಲಾಗುವುದು. ಇದು ಪರಿಣಾಮಕಾರಿ ಶಿಕ್ಷಣ ಶಾಸ್ತ್ರ, ಮತ್ತು ವಿದ್ಯಾರ್ಥಿಗಳ ತೊಡಗಿಸಿಕೊಳ್ಳುವಿಕೆಯನ್ನು ಸುಧಾರಿಸುತ್ತದೆ.<br><br>ಪ್ರೌಢಶಾಲಾ ವಿದ್ಯಾರ್ಥಿಗಳ ಕಲಿಕೆಯನ್ನು ಸುಧಾರಿಸುವುದು ಹಾಗು 10ನೇ ಮತ್ತು 12ನೇ ತರಗತಿಯ ಮಂಡಳಿ ಪರೀಕ್ಷೆಗಳಲ್ಲಿ ಫಲಿತಾಂಶವನ್ನು ಹೆಚ್ಚಿಸುವ ಕಡೆ ಗಮನ |

| | | |
|---|---|---|
| | | ಹರಿಸಲಾಗಿದೆ. ಪ್ರೌಢ ತರಗತಿಗಳ ಫಲಿತಾಂಶಗಳಿಗೆ ವಿಶೇಷ ಒತ್ತು ನೀಡಲಾಗುವುದು. ಇದರಲ್ಲಿ STEAM ಶಿಕ್ಷಣ, ವೃತ್ತಿಪರ ತರಬೇತಿ, ವೃತ್ತಿ ಸಲಹೆ, ಸ್ಪರ್ಧಾತ್ಮಕ ಪರೀಕ್ಷೆ ತಯಾರಿ ಮತ್ತು 21ನೇ ಶತಮಾನದ ಕೌಶಲಗಳಾದ ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ, ಸಹಯೋಗ, ಸಂವಹನ ಮತ್ತು ಜೀವನ ಕೌಶಲಗಳ ಅಭಿವೃದ್ಧಿಯನ್ನು ಸಮ್ಮಿಳಿತಗೊಳಿಸಲಾಗುವುದು. AI ಮತ್ತು ಡಿಜಿಟಲ್<br>ಸಂಪನ್ಮೂಲಗಳನ್ನು ಸಂಯೋಜಿಸುವ ಮೂಲಕ ಹಾಗೂ ಮೂಲಸೌಕರ್ಯವನ್ನು ಸುಧಾರಿಸುವ ಮತ್ತು ವ್ಯಾಪ್ತಿಯನ್ನು ವಿಸ್ತರಿಸುವ ಮೂಲಕ ಶಾಲೆಗಳು ಸಾರ್ವಜನಿಕ ಶಿಕ್ಷಣದ ಪ್ರಗತಿಪರ ಮರುಕಲ್ಪನೆಯನ್ನು ನೀಡುತ್ತದೆ. ಈ ಶಾಲೆಗಳು ಹಂತ ಹಂತವಾಗಿ ಉಚಿತ ಸಾರಿಗೆ ಸೌಲಭ್ಯ ಮತ್ತು ತಾಂತ್ರಿಕ ಸಮ್ಮಿಳಿತದ ಕಲಿಸುವಿಕೆಯೊಂದಿಗೆ ಮಕ್ಕಳ ಶಿಕ್ಷಣ ಗುಣಮಟ್ಟವನ್ನು ಉತ್ತಮಪಡಿಸಲಾಗುವುದು.<br><br>ಮಕ್ಕಳ ಕಲಿಕೆಯನ್ನು ಉತ್ತಮಪಡಿಸಲು ಮತ್ತು ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಪರೀಕ್ಷಾ ಫಲಿತಾಂಶವನ್ನು ಸುಧಾರಿಸಲು ತರಗತಿವಾರು, ವಿಷಯಾವಾರು ಪಠ್ಯ ಆಧಾರಿತ ಮೌಲ್ಯಮಾಪನ (Lesson Based Assessment-LBA) ನಡೆಸಲು ಎಲ್ಲಾ ತರಗತಿಗಳಿಗೆ ಸಮಗ್ರ ಪ್ರಶ್ನೆಕೋಠಿಯನ್ನು (Exhaustive Question Bank) ಸಿದ್ಧಪಡಿಸಲಾಗಿದೆ. ಫಲಿತಾಂಶ ಸುಧಾರಣೆಗೆ ವಿಷಯಾವಾರು ಶಿಕ್ಷಕರಿಗೆ ತರಬೇತಿ ಕಾರ್ಯಾಗಾರಗಳನ್ನು ನಡೆಸಿದ್ದು, ವಿಶೇಷ ತರಗತಿಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸಲು ಕ್ರಮವಹಿಸಲಾಗುತ್ತಿದೆ.<br><br>2026-27ನೇ ಸಾಲಿನಿಂದ ರಾಜ್ಯ ಎಲ್ಲಾ ಕೆ.ಪಿ.ಎಸ್. ಶಾಲೆಗಳು, ಪಿಎಂ.ಶ್ರೀ ಶಾಲೆಗಳು, ಆದರ್ಶ ವಿದ್ಯಾಲಯಗಳು, ದ್ವಿ ಭಾಷಾ ತರಗತಿಗಳನ್ನು ಹೊಂದಿರುವ ಸರ್ಕಾರಿ ಶಾಲೆಗಳು, ಪೂರ್ವ ಪ್ರಾಥಮಿಕ ತರಗತಿಗಳನ್ನು ಹೊಂದಿರುವ ಸರ್ಕಾರಿ ಶಾಲೆಗಳು, ಆಯ್ದ 15 ಜಿಲ್ಲೆಗಳ ಎಲ್ಲಾ ಸರ್ಕಾರಿ ಶಾಲೆಗಳು ಮತ್ತು 10 CEPMIZ ತಾಲ್ಲೂಕುಗಳ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ 1 ರಿಂದ 5 ನೇ ತರಗತಿಗಳನ್ನು ದ್ವಿ ಭಾಷಾ ಏಕತರಗತಿ ಬೋಧನಾ ವ್ಯವಸ್ಥೆಯನ್ನು ಪ್ರಾರಂಭಿಸಲಾಗುತ್ತಿದೆ. |

**ಇಪಿ 74 ಯೋಸಕ 2026**

**(ಎಸ್. ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**

ಅನುಬಂಧ-01

District wise number of students admitted under RTE in Aided and Unided schools during and 2025-26

| | Aided | | UnAided | |
|---|---|---|---|---|
| District name | LKG | Class 1 | LKG | Class 1 |
| BELAGAVI | 0 | 125 | 0 | 0 |
| BAGALKOTE | 3 | 327 | 16 | 22 |
| VIJAYAPURA | 1 | 122 | 1 | 15 |
| KALABURAGI | 0 | 75 | 8 | 45 |
| BIDAR | 0 | 35 | 0 | 0 |
| RAICHUR | 0 | 31 | 0 | 0 |
| KOPPAL | 0 | 66 | 0 | 0 |
| GADAG | 0 | 49 | 0 | 0 |
| DHARWAD | 0 | 69 | 114 | 98 |
| UTTARA KANNAD | 0 | 0 | 0 | 0 |
| HAVERI | 6 | 89 | 0 | 0 |
| BALLARI | 0 | 33 | 0 | 10 |
| CHITRADURGA | 0 | 3 | 0 | 0 |
| DAVANGERE | 0 | 12 | 129 | 153 |
| SHIVAMOGGA | 0 | 15 | 2 | 2 |
| UDUPI | 0 | 0 | 30 | 4 |
| CHIKMAGALUR | 0 | 2 | 0 | 0 |
| TUMKUR | 0 | 0 | 5 | 34 |
| KOLAR | 0 | 0 | 17 | 49 |
| BENGALURU SOU | 0 | 23 | 5 | 0 |
| BENGALURU RUR | 0 | 8 | 22 | 13 |
| MANDYA | 0 | 7 | 2 | 1 |
| HASSAN | 0 | 0 | 2 | 0 |
| DAKSHINA KANNA | 0 | 0 | 15 | 16 |
| KODAGU | 0 | 0 | 2 | 0 |
| MYSURU | 0 | 25 | 141 | 72 |
| CHAMARAJANAG | 0 | 8 | 0 | 0 |
| BENGALURU NOR | 0 | 10 | 0 | 0 |
| CHIKKABALLAPUR | 0 | 3 | 0 | 0 |
| CHIKKODI | 0 | 258 | 0 | 0 |
| MADHUGIRI | 0 | 0 | 0 | 0 |
| RAMANAGARA | 0 | 0 | 2 | 5 |
| YADAGIRI | 0 | 1 | 0 | 3 |
| SIRSI | 0 | 12 | 0 | 0 |
| VIJAYANAGARA | 0 | 28 | 0 | 0 |
| Total | 10 | 1436 | 513 | 542 |

9/3/2026
ನಿರ್ದೇಶಕರು
(ಪ್ರಾಥಮಿಕ ಶಿಕ್ಷಣ)

# ಅನುಬಂಧ-೦೨

| 2025-26ನೇ ಸಾಲಿನ ಆರ್.ಟಿ.ಇ. ಮಕ್ಕಳ ಸಂಖ್ಯೆ (ದಿನಾಂಕ : 06.12.2025 ಕ್ಕೆ ಎಸ್.ಎ.ಟಿ.ಎಸ್. ತಂತ್ರಾಂಶದಲ್ಲಿದ್ದಂತೆ ) | | | | | | | | | | | | |
|---|---|---|---|---|---|---|---|---|---|---|---|---|
| Sl no | District | LKG | UKG | Class 1 | Class 2 | Class 3 | Class 4 | Class 5 | Class 6 | Class 7 | Class 8 | Total |
| 1 | MYSURU | 141 | 136 | 292 | 237 | 237 | 352 | 295 | 1947 | 1829 | 2017 | 7483 |
| 2 | VIJAYAPURA | 1 | 0 | 30 | 22 | 25 | 30 | 32 | 1253 | 1066 | 1843 | 4302 |
| 3 | CHITRADURGA | 0 | 0 | 0 | 0 | 0 | 0 | 0 | 1041 | 1002 | 924 | 2967 |
| 4 | CHIKKAMANGALURU | 0 | 0 | 0 | 0 | 0 | 0 | 0 | 516 | 492 | 449 | 1457 |
| 5 | TUMAKURU MADHUGIRI | 0 | 0 | 0 | 0 | 0 | | 0 | 660 | 647 | 587 | 1894 |
| 6 | TUMAKURU | 5 | 30 | 38 | 39 | 33 | 42 | 40 | 1120 | 1052 | 890 | 3289 |
| 7 | BENGALURU U SOUTH | 5 | 6 | 9 | 139 | 168 | 349 | 339 | 8392 | 7614 | 9928 | 26949 |
| 8 | BELAGAVI CHIKKODI | 0 | 0 | 0 | 0 | 0 | 0 | 0 | 1894 | 1694 | 1323 | 4911 |
| 9 | BELAGAVI | 0 | 0 | 0 | 3 | 0 | 0 | 17 | 1087 | 951 | 1151 | 3209 |
| 10 | BALLARI | 0 | 0 | 10 | 24 | 12 | 17 | 21 | 1010 | 872 | 1560 | 3526 |
| 11 | VIJAYANAGARA | 0 | 0 | 0 | 0 | 0 | 0 | 1 | 625 | 516 | 810 | 1952 |
| 12 | UTTARA KANNADA SIRSI | 0 | 0 | 0 | 0 | 0 | 0 | 0 | 131 | 121 | 136 | 388 |
| 13 | BAGALKOT | 16 | 28 | 27 | 28 | 7 | 5 | 9 | 1134 | 981 | 970 | 3205 |
| 14 | KOLAR | 17 | 15 | 58 | 75 | 70 | 76 | 51 | 296 | 232 | 1689 | 2579 |
| 15 | DAKSHINA KANNADA | 15 | 21 | 34 | 50 | 42 | 44 | 67 | 703 | 462 | 1137 | 2575 |
| 16 | KODAGU | 2 | 2 | 0 | 5 | 3 | 7 | 15 | 291 | 327 | 290 | 942 |
| 17 | RAMANAGARA | 2 | 6 | 7 | 4 | 5 | 7 | 5 | 435 | 429 | 847 | 1747 |
| 18 | RAICHUR | 0 | 0 | 0 | 0 | 0 | 1 | 3 | 1925 | 1520 | 1744 | 5193 |
| 19 | BENGALURU U NORTH | 0 | 0 | 0 | 0 | 0 | 0 | 0 | 6329 | 5871 | 7528 | 19728 |
| 20 | KOPPAL | 0 | 0 | 0 | 0 | 0 | 0 | 0 | 620 | 519 | 862 | 2001 |
| 21 | YADAGIRI | 0 | 0 | 7 | 7 | 0 | 4 | 4 | 869 | 611 | 1100 | 2602 |
| 22 | GADAG | 0 | 0 | 0 | 0 | 0 | 0 | 0 | 367 | 336 | 531 | 1234 |
| 23 | CHAMARAJANAGARA | 0 | 0 | 0 | 0 | 0 | 0 | 0 | 33 | 33 | 390 | 456 |
| 24 | HASSAN | 2 | 3 | 0 | 2 | 0 | 3 | 1 | 927 | 729 | 863 | 2530 |
| 25 | BENGALURU RURAL | 22 | 22 | 33 | 32 | 22 | 27 | 33 | 842 | 791 | 1357 | 3181 |
| 26 | SHIVAMOGGA | 2 | 0 | 2 | 4 | 4 | 9 | 8 | 554 | 590 | 811 | 1984 |
| 27 | MANDYA | 2 | 1 | 1 | 1 | 0 | 0 | 0 | 551 | 515 | 678 | 1749 |
| 28 | BIDAR | 0 | 0 | 0 | 0 | 0 | 0 | 1 | 651 | 596 | 2389 | 3637 |
| 29 | DAVANAGERE | 129 | 112 | 341 | 303 | 236 | 312 | 296 | 1572 | 1453 | 1339 | 6093 |
| 30 | DHARWAD | 114 | 110 | 193 | 119 | 95 | 167 | 197 | 1517 | 1587 | 1852 | 5951 |
| 31 | HAVERI | 0 | 0 | 0 | 0 | 0 | 0 | 0 | 1044 | 876 | 783 | 2703 |
| 32 | UDUPI | 30 | 19 | 17 | 26 | 30 | 31 | 29 | 735 | 698 | 852 | 2467 |
| 33 | KALBURGI | 8 | 21 | 66 | 103 | 92 | 92 | 72 | 984 | 815 | 2095 | 4348 |
| 34 | CHIKKABALLAPURA | 0 | 10 | 10 | 10 | 8 | 5 | 9 | 1064 | 1022 | 1229 | 3367 |
| 35 | UTTARA KANNADA | 0 | 0 | 0 | 0 | 0 | 0 | 0 | 257 | 235 | 354 | 846 |
| | **Total** | 513 | 542 | 1175 | 1233 | 1089 | 1580 | 1545 | 43376 | 39084 | 53308 | 143445 |

9/2/2026

ನಿರ್ದೇಶಕರು(ಪ್ರಾಥಮಿಕ)